ದಿ:16-08-2025 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್.ಹೆಚ್.ಹೆಚ್. ವಕೀಲರಿಂದ 1 ರಿಂದ 5 ನೇ ಎದುರುದಾರರು ಪರವಾಗಿಃ**

1. ನಾನು ಪಿಯುಸಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾವನ್ನು ಬರೆಯಲು ಮಾಹಿತಿಯನ್ನು ನನ್ನ ಅಣ್ಣ ಕೊಟ್ಟಿರುತ್ತಾರೆ. ಈಗ ನನಗೆ ತೋರಿಸಿದ ಪ್ರತಿವಾದ ಪತ್ರದ ಮಾಹಿತಿ ನನಗೆ ಇಲ್ಲ. ಈ ದಾವಾಕ್ಕೆ ಮಾಹಿತಿಯನ್ನು ನಮ್ಮ ಅಣ್ಣ ಕೊಟ್ಟಿರುತ್ತಾರೆ ನನಗೆ ಏನೂ ಗೊತ್ತಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ನಾವು 6 ಜನ ಮಕ್ಕಳು. ನಾನು ನಮ್ಮ ತಂದೆ ತಾಯಿಗೆ 5 ನೇ ಮಗ. ನಮ್ಮ ತಂದೆಯವರು ದಿನಾಂಕ 25-08-2020 ರಂದು ಮರಣ ಶಾಸನ ಬರೆದಿದ್ದಾರೆ ಅಂದರೆ ಸರಿಯಲ್ಲ. ದಿಃ 28-07-2007 ರಂದು ಪಾಲು ವಿಭಾಗ ಆಗಿದೆ ಅಂದರೆ ನಿಜ. ಆ ಪ್ರಕಾರ ನಮ್ಮ ತಂದೆಯವರಿಗೆ ಮತ್ತು ನನ್ನ ಸಹೋದರರಿಗೆ ಪ್ರತಿಯೊಬ್ಬರಿಗೂ ಒಂದೊಂದು ಭಾಗ ಬಂದಿದೆ ಅಂದರೆ ನಿಜ. ಅದರಂತೆಯೇ ಖಾತೆ ಪಹಣಿಯಲ್ಲಿ ನಮೂದಾಗಿದೆ ಅಂದರೆ ನಿಜ. ನಾವು ಅನುಭವ-ಸ್ವಾಧೀನದಲ್ಲಿ ಇದ್ದೇವೆ ಅಂದರೆ ನಿಜ.

ನಮ್ಮ ಅಣ್ಣ ಶಾಂತ ವೀರಪ್ಪರವರ ಮಕ್ಕಳು P&SC.11/2023 ನ್ಯಾಯಾಲಯದಲ್ಲಿ ದಾಖಲು ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ ವರ್ತಮಾನ ಪತ್ರದಲ್ಲಿ ನೋಟಿಸ್ಸು ಪ್ರಕಟಣೆ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. P&SC.11/2023 ನೇದರಲ್ಲಿ ನಾನು ಪಾರ್ಟಿಯಾಗಿದ್ದೇನೆ. ನಾನು ನ್ಯಾ ಯಾಲಯಕ್ಕೆ ಬರದೇ ಇರುವುದರಿಂದ ದಿಃ 06-08-2023 ರಂದು ನನಗೆ ಖುದ್ದಾಗಿ ಹಾಜರಾಗಲು ವರ್ತಮಾನ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದರು ಅಂದರೆ ಅದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಉದ್ದೇಶಪೂರ್ವಕವಾಗಿ ಹಾಜರಾಗಿರುವುದಿಲ್ಲ ಅಂದರೆ ಸುಳ್ಳು. ನನ್ನ ಅಣ್ಣನ ಮಕ್ಕಳ ವಿಚಾರ ನನಗೆ ಗೊತ್ತಿದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಸಮಯ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.